ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ -19

5ನೇ ವರ್ಷ 6ನೇ ಸಂಚಿಕೆ ಕೊಪ್ಪ 28-9-1986 ಭಾನುವಾರ ಬೆಲೆ 40 ಪೈಸೆ

ಆಯುರ್ವೇದ ಚಿಕಿತ್ಸೆಯ ನೆಪ: ಹಳ್ಳಿಗರಿಂದ

ಹಣ, ಬೆಳ್ಳಿ ದೋಚುವ 'ವೈದ್ಯೆ'?

ಕೊಪ್ಪ: ನ. ರಾ. ಪುರ, ಕೊಪ್ಪ, ಹರಿಹರಪುರಗಳಲ್ಲಿ ಆಯುರ್ವೇದ ಚಿಕಿತ್ಸಾಲಯ ನಡೆಸುತ್ತೇನೆಂದು ಹೇಳಿಕೊಂಡು ಕೇರಳದ ಮಧ್ಯ ವಯಸ್ಸು ದಾಟಿದ ಮಹಿಳೆಯೊಬ್ಬರು ಹರಿಹರಪುರ ಸುತ್ತಮುತ್ತ ಬಹಳ ಜನರಿಗೆ ಮೋಸ (ಮೋಡಿ?) ಮಾಡಿ ಹಣ ಮತ್ತು ಬೆಳ್ಳಿ ಒಡವೆಗಳನ್ನು ಲಪಟಾಯಿಸುತ್ತಿದ್ದಾರೆಂದು ಪುಕಾರು ಎದ್ದಿದ್ದು, ಹರಿಹರಪುರದಲ್ಲಿ ಅವರ 'ಚಿಕಿತ್ಸಾಲಯ'ವನ್ನು ಸುತ್ತಮುತ್ತಲ ಉದ್ರಿಕ್ತ ಜನ ಖಾಲಿ ಮಾಡಿಸಿದ್ದಾರೆಂದು ತಿಳಿದು ಬಂದಿದೆ.

ಎಲ್ಲಾ ಬಗೆಯ ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ಸಹ ಕೇವಲ 3 ರೂ. ಖರ್ಚಿನಲ್ಲಿ ಚಿಕಿತ್ಸೆ ಕೊಡುವುದಾಗಿಯೂ, ತಾನು ಮಿಲಿಟರಿ ನಿವೃತ್ತಳೆಂದೂ ಕರಪತ್ರ ಹಂಚಿಸಿರುವ ಈಕೆ ಮುತ್ತಿನಕೊಪ್ಪದ ಕಡೆ ಸಹ ಓಡಾಡಿರುವುದಾಗಿ ಹೇಳಲಾಗಿದ್ದು, ಆ ಕಡೆಯಿಂದ ಮೋಸದ ವರದಿಗಳು ಇನ್ನೂ ಲಭ್ಯವಾಗಬೇಕಿದೆ. ಕೊಪ್ಪದಲ್ಲೂ ಮೋಸ ಮಾಡಿದ ದೂರುಗಳು ಬಂದಿವೆ.

ಮಕ್ಕಳಾಗದಿರುವವರಿಗೆ ಮಕ್ಕಳಾಗುವಂತೆ ಚಿಕಿತ್ಸೆ; ಪಾರ್ಶ್ವವಾಯು, ಮೂಲವ್ಯಾಧಿ ಮುಂತಾದ ಕ್ಲಿಷ್ಟ ರೋಗಗಳಿಗೆ ಚಿಕಿತ್ಸೆ; ವ್ಯಾಪಾರ-ವಹಿವಾಟಿನಲ್ಲಿ ನಷ್ಟ ಮತ್ತು ಸಾಂಸಾರಿಕ ತೊಂದರೆಗಳ ನಿವಾರಣೆ—ಮುಂತಾದುವುಗಳಿಗಾಗಿ ನಡೆಸುವ 'ಪೂಜೆ'ಗಳ ಹೆಸರಲ್ಲಿ ಈಕೆ ಜನರನ್ನು ಮರುಳುಗೊಳಿಸಿ, ಅವರಿಂದ ಬೆಳ್ಳಿಯನ್ನೂ ಹಣವನ್ನೂ ಕೀಳುತ್ತಿದ್ದಾರೆನ್ನಲಾಗಿದೆ.

ಭಿಕ್ಷುಕರಿಗೆ 10 ಪೈಸೆಕೊಡ ಬೇಕಾದರೂ ಎರಡೆರಡು ಸಾರಿ ಲೆಕ್ಕ ಹಾಕುವ ತಾವು ಈಕೆ ಕೇಳಿದ್ದನ್ನೆಲ್ಲಾ ಕೊಟ್ಟಿದ್ದಲ್ಲದೆ ಇನ್ನೂ ಏನು ಕೇಳಿದರೂ ಕೊಡೋಣವೆಂದು ಅನ್ನಿಸುವಂಥ ಒಂದು ರೀತಿಯ ಮೋಡಿಗೆ ಒಳಗಾದುದಾಗಿ ಹರಿಹರಪುರದ ಸಣ್ಣ ವ್ಯಾಪಾರಿಯೊಬ್ಬರು ತಿಳಿಸಿದ್ದಾರೆ. ಕೆಲವು ವಸ್ತುಗಳನ್ನು ಹಿಂದಕ್ಕೆ ಪಡೆದಿರುವ ಈತ ತಮಗಿನ್ನೂ ಸುಮಾರು 970ರೂ.ಗಳಷ್ಟು ಹಣ ಮತ್ತು ವಸ್ತುಗಳು ಬರಬೇಕಿದೆ ಎಂದಿದ್ದಾರೆ.

ಇವರ ಹೊಸಾ ವಾಚನ್ನು ತನಗೆ ಬೇಕೆಂದು ಕಟ್ಟಿಕೊಂಡು ಹೋಗಿದ್ದ ಆಕೆಗೆ ಇನ್ಯಾರದೋ ಮನೆಯಲ್ಲಿ ಜೋರು ಮಾಡಿದಾಗ, "ಏನೆಂದುಕೊಂಡಿದ್ದೀರಿ ನನ್ನನ್ನು? ನನ್ನ ಈ 500 ರೂ. ವಾಚು ಬೇಕಾದರೆ ಇಟ್ಕೊಂಡಿರಿ" ಎಂದು ಅಲ್ಲಿ ಕಳಚಿಟ್ಟು ಹೋಗಿರುವುದಾಗಿ ತಿಳಿಸಿದ್ದಾರೆ.

ಈಕೆ ಮಲೆನಾಡಿನ ಈ ಭಾಗದಲ್ಲಿ ಜನರ ಅಜ್ಞಾನ ಬಳಸಿ ಸದ್ಯ ದುಡ್ಡು-ಒಡವೆ ಮಾತ್ರ ದೋಚುತ್ತಿರುವುದಾಗಿ ಹಲವಾರು ಜನ ತಿಳಿಸಿದ್ದು, ಮುಂದೆ ಹಾಗೇ ಹೆಣ್ಮಕ್ಕಳನ್ನು ಬೊಂಬಾಯಿಗೆ ಸಾಗಿಸುವಂಥ ಜಾಲವೂ ಈಕೆಯದಾಗಿರಬಹುದೆಂದು ಶಂಕಿಸಿದ್ದಾರೆ.

ಈಕೆಯಿಂದ ನಷ್ಟಕ್ಕೊಳಗಾಗಿರುವ ಯಾರಾದರೂ ಪೋಲೀಸರಿಗೆ ದೂರು ನೀಡಿ ಈಕೆ ಮತ್ತು ಅವರ ಜೊತೆಗಾರರ ಬಗೆಗಿನ ಸತ್ಯವನ್ನು ಬಯಲಿಗೆಳೆಯಬೇಕಾಗಿದೆ. ಸದ್ಯಕ್ಕೆ ಹಳ್ಳಿಗಾಡಿನ ಜನ ಈಕೆಯ 'ಚಿಕಿತ್ಸೆ'ಗಳ ಬಗ್ಗೆ ಎಚ್ಚರದಿಂದಿರಬೇಕು ಎಂದು ನೊಂದ ಜನ ಎಚ್ಚರಿಸಿದ್ದಾರೆ.

ಹಾಲುತ್ಪಾದಕರ ಸಂಘಗಳ ಅಧ್ಯಕ್ಷರ ಆಯ್ಕೆ

ಹರಿಹರಪುರ : ಇಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘದ ಪ್ರಾರಂಭೋತ್ಸವವು ಸೆ. 17 ರಂದು ಅಭಿನವ ರಾಮಾನಂದ ಸರಸ್ವತಿ ಸ್ವಾಮಿಗಳ ಸಮ್ಮುಖದಲ್ಲಿ ನಡೆಯಿತು. ಹಾಸನ ಹಾಲು ಉತ್ಪಾದಕ ಒಕ್ಕೂಟದ ಪದಾಧಿಕಾರಿಗಳು, ಮತ್ತು ಕೊಪ್ಪದ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಭಾಗವಹಿಸಿದ್ದರು.

ಸಂಘದ ಪ್ರಥಮ ಅಧ್ಯಕ್ಷರಾಗಿ ಎಚ್. ಜಿ. ಸುಬ್ರಹ್ಮಣ್ಯ ಅವರೂ, ಕಾರ್ಯನಿರ್ವಾಹಕ ಸಮಿತಿಗೆ ಈ ಕೆಳಕಂಡವರು ಆಯ್ಕೆಯಾದರು: ಫಣಿರಾಜಭಟ್ಟ, ಎಚ್. ಆರ್. ಶಿವರಾಂ, ಎಚ್. ಎಸ್. ಮಂಜುನಾಥ್, ಸುರೇಶ್, ವೆಂಕಪ್ಪ, ಸರಸ್ವತಿ, ಬಿ. ಪಿ. ಶ್ರೀನಿವಾಸಗೌಡ ಮತ್ತು ಚಂದ್ರಶೇಖರಯ್ಯ. ತಾ. 5.10.86 ರಿಂದ ಸಂಘದಲ್ಲಿ ಹಾಲು ವಿತರಣೆ ಪ್ರಾರಂಭವಾಗಲಿದೆಯೆಂದು ತಿಳಿದು ಬಂದಿದೆ. (ವರದಿ : ಎಚ್. ಎಸ್. ಮಂಜುನಾಥ್.)

ಕೊಪ್ಪ

ಇಲ್ಲಿನ ಸೋಮ್ಲಾಪುರ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಾರ್ಯಕಾರಿ ಸಮಿತಿ ಹೀಗಿದೆ: **ಶಿರೀಷ್ ಪಿ. ಗುರ್ಜರ್ ಅಧ್ಯಕ್ಷರು**, ಎಸ್. ಕೆ. ಶಿವಸ್ವಾಮಿ, ಜೆ. ಪಿಂಟೋ, ಎಂ. ಆರ್. ಕಣ್ಣನ್, ದಾಸ್ ಪ್ರಕಾಶ್, ಎಂ. ಜೆ. ಜಾರ್ಜ್, ಎಂ. ಜೆ. ಫ್ರಾನ್ಸಿಸ್, ಅನ್ನಿ ಡಿ'ಸೋಜಾ ಮತ್ತು ತಿಮ್ಮಯ್ಯ ಸದಸ್ಯರು. ಹುಲುಮಗ್ಗೆಯ ಶ್ರೀನಿವಾಸ ಎಂಬವರನ್ನು ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಸಮಿತಿ ನೇಮಕ ಮಾಡಿದೆ.

ಪ್ರೌಢಶಾಲಾ ಶಿಕ್ಷಕರ ಬೇಡಿಕೆ: ಮೆರವಣಿಗೆ

ಕೊಪ್ಪ: ಈ ತಾಲ್ಲೂಕಿನ ಪ್ರೌಢಶಾಲಾ ಶಿಕ್ಷಕರು ಸೆ. 26ರಂದು ಕಪ್ಪು ಪಟ್ಟಿ ಧರಿಸಿ ಕೆಲಸ ನಿರ್ವಹಿಸಿ ಅನಂತರ ಮೆರವಣಿಗೆಯಲ್ಲಿ ತಾ॥ ಕಚೇರಿಗೆ ಧಾವಿಸಿ ತಮ್ಮ ಬೇಡಿಕೆಗಳ ಬಗ್ಗೆ ಮನವಿ ಸಲ್ಲಿಸಿದರು. ವೇತನ ತಾರತಮ್ಯ ಸರಿಪಡಿಸುವಿಕೆ, ಹೈದರಾಬಾದು ವೇತನ ಶ್ರೇಣಿ ನೀಡಿಕೆ, ಮೌಲ್ಯಮಾಪನ ದರ ಹೆಚ್ಚಳ, ಪದೋನ್ನತಿ ಸಂಬಳ ಬಡ್ತಿ, ಗ್ರಾಮೀಣ ಭತ್ಯ ಮುಂತಾದುವು ಅವರ ಬೇಡಿಕೆಗಳಾಗಿದ್ದವು.

ಹರಿಹರಪುರ ಪ್ರತಿಭಟನೆ ಸೆಪ್ಟೆಂಬರ್ 30ಕ್ಕೆ

ಹರಿಹರಪುರ: ಇಲ್ಲಿನ ಪೋಲೀಸ್ 'ದೌರ್ಜನ್ಯ'ದ ವಿರುದ್ಧ ಬಿಜೆಪಿ ಏರ್ಪಡಿಸಿರುವ ಪ್ರತಿಭಟನೆ ಸೆ. 30ರಂದು ನಡೆಯಲಿದ್ದು, ಇದರಲ್ಲಿ ಯಡಿಯೂರಪ್ಪ, ಕರಂಬಳ್ಳಿಯವರಲ್ಲದೆ, ಬಿ.ಎಸ್. ವಿಠಲರಾವ್ ಮತ್ತು ತೀರ್ಥಹಳ್ಳಿ ತಾ॥ ಬಿಜೆಪಿ ನಾಯಕರುಗಳೂ ಭಾಗವಹಿಸಲಿದ್ದಾರೆಂದು ಪ್ರಕಟಿಸಲಾಗಿದೆ.

ಕ್ಷೇತ್ರದಲ್ಲಿ ಶಾಸಕರ ಪ್ರವಾಸ

ಕೊಪ್ಪ: ಶಾಸಕ ಗೋವಿಂದಗೌಡರು ಸೆ. 25 ಮತ್ತು 26ರಂದು ನ. ರಾ. ಪುರ ಮತ್ತು ಕೊಪ್ಪ ತಾ॥ ಗಳಲ್ಲಿ ಪ್ರವಾಸ ಮಾಡಿದರು.

ನ. ರಾ. ಪುರ ತಾ॥ ಬೆಳ್ಳೂರಿನಲ್ಲಿ 40-50 ವರ್ಷಗಳಿಂದ ಮನೆ ಕಟ್ಟಿಕೊಂಡು ಸರ್ಕಾರಿ ಭೂಮಿಯಲ್ಲಿ ವಾಸವಾಗಿದ್ದ 150 ಜನರಿಗೆ ಮನೆ ನಿವೇಶನದ ಹಕ್ಕುಪತ್ರ ವಿತರಿಸಿದ ಅವರು ಹಲವರಿಗೆ ಸಣ್ಣ ಉಳಿತಾಯ ಸರ್ಟಿಫಿಕೇಟುಗಳನ್ನು ನೀಡಿದರು. ಪಂಚಾಯ್ತಿಯ ಶೇ. 18ರ ಹಣದಲ್ಲಿ ಹರಿಜನ-ಗಿರಿಜನರಿಗೆ ಸ್ಟೀಲ್ ಪಾತ್ರೆಗಳನ್ನು ವಿತರಿಸಿದರು. ಕ. ವಿ. ಮಂ. ಎಕ್ಸಿ॥ ಇಂಜಿನಿಯರ್ ಗಿರಿಯಪ್ಪ ಬೀದಿ ದೀಪ ಉದ್ಘಾಟಿಸಿದರು.

ಸೆ. 26ರಂದು ಮೇಗುಂದಾ ಹೋಬಳಿಯ ಜಯಂತಿನಗರದಲ್ಲಿ 65 ಸಾವಿರ ರೂ. ವೆಚ್ಚದ ಗ್ರಾವಿಟಿ ನೀರು ಸರಬರಾಜು ಯೋಜನೆ ಉದ್ಘಾಟಿಸಿ, ಹರಿಜನ ಕಾಲೊನಿಗೆ ಬೀದಿ ದೀಪ, ತೆಂಗಿನ ಸಸಿಗಳನ್ನು 8 ದಿನದೊಳಗೆ ಕೊಡಿಸುವ ಭರವಸೆಯಿತ್ತರು.

ಜಲದುರ್ಗ, ನೇರಲೆಕೊಪ್ಪ, ಬಿಳಾಲುಕೊಪ್ಪ, ಕಾರೆಮನೆಗಳಿಗೂ ಭೇಟಿ ನೀಡಿ ಕುಂದು ಕೊರತೆ ವಿಚಾರಿಸಿದರು.

ಮಲೆನಾಡಿನಲ್ಲಿ ಕ್ಷೀರೋದ್ಯಮ ಅಭಿವೃದ್ಧಿಯ ಬಗ್ಗೆ ಆಗಬೇಕಾಗಿರುವ ಕೆಲಸಗಳು — ಒಂದು ಮುನ್ನೋಟ

ತುಂಬಾ ತಡವಾಗಿಯಾದರೂ, ಬಾಳೆಹೊನ್ನೂರಿನ ಹಾಲು ಶೀತಲೀಕರಣ ಕೇಂದ್ರವನ್ನು ಪುನಶ್ಚೇತನಗೊಳಿಸಲು ಕ್ರಮ ಕೈಗೊಳ್ಳಲಾಗಿರುವ ವಿಷಯ ಈಗಾಗಲೇ ತಮ್ಮೆಲ್ಲರ ಗಮನಕ್ಕೆ ಬಂದಿದೆ. ಇಷ್ಟು ವರ್ಷಗಳಲ್ಲಿ ಆಗದೇ ಇದ್ದ ಕೆಲಸ ಕೆಲವಾರು ತಿಂಗಳುಗಳಲ್ಲಿ ನಡೆದಿದೆ. ಬಿಳಾಲುಕೊಪ್ಪ, ಕೊಪ್ಪ, ಶೃಂಗೇರಿ, ಹರಿಹರಪುರಗಳಲ್ಲಿ ಹಾಲು ಉತ್ಪಾದಕರ ಸಂಘಗಳು ನೊಂದಾವಣೆಯಾಗಿದ್ದು, ಸಿ. ಆರ್. ಎಸ್., ಜಯಪುರ, ಬಾಳೆಹೊನ್ನೂರು ಇತ್ಯಾದಿ ಕೇಂದ್ರಗಳು ನೊಂದಾವಣೆಯ ಹಂತದಲ್ಲಿವೆ.

ಹಾಲಿನ ಉತ್ಪಾದನೆ ಮತ್ತು ಸಂಗ್ರಹಣೆ ತೀರ ಅವ್ಯವಸ್ಥೆಯಲ್ಲಿದ್ದ ಹಂತಕ್ಕೂ, ಈಗಿನ ವ್ಯವಸ್ಥಿತ ಏರ್ಪಾಡಿನ ಹಂತಕ್ಕೂ ಕಾರಣಗಳನ್ನು ಪರಿಶೀಲಿಸಿದರೆ ಕರ್ನಾಟಕ ಡೈರಿ ಒಕ್ಕೂಟಕ್ಕೆ (ಕೆ. ಎಂ. ಎಫ್.) ಹಿಂದೆ ಇದ್ದ ಅಧಿಕಾರವೇ ಈಗಲೂ ಇದೆ. ಹಿಂದೆ ಇದ್ದ ಉತ್ಪಾದಕರೇ ಈಗಲೂ ಇದ್ದಾರೆ. ಅಂದರೆ ಹಿಂದೆ ಇದ್ದ ಅಧಿಕಾರಿಗಳ ಕರ್ತವ್ಯಲೋಪ, ಅಶ್ರದ್ಧೆ ಹಾಗೂ ಉತ್ಪಾದಕರ ಅಸಂಘಟನೆ ಆಗಿನ ಅವ್ಯವಸ್ಥೆಗೆ ಕಾರಣ ಎಂಬುದು ಸ್ಪಷ್ಟ. ಈಗ ಒಕ್ಕೂಟದವರಿಗೆ ತಮ್ಮ ಕರ್ತವ್ಯದ ಸ್ಪಷ್ಟ ಚಿತ್ರಣ ದೊರೆತಿದೆ ಎಂದು ಭಾವಿಸುತ್ತೇನಲ್ಲದೆ ಹಾಲು ಉತ್ಪಾದಕರೂ ಸಹ ಸಂಘಟಿತರಾಗಬೇಕಾಗಿರುವ ಪ್ರಮೇಯ ಮನಗಂಡಿದ್ದಾರೆ ಎಂದೂ ಭಾವಿಸುತ್ತೇನೆ. ಈಗಿನ ಹಂತದಲ್ಲಿ "ಹಿಂದೆಯೇ ಈ ಕೆಲಸಗಳು ಆಗಿದ್ದಿದ್ದರೆ!" ಎಂದು ಅನ್ನಿಸಿದರೂ ಅದನ್ನೇ ಹೆಚ್ಚಾಗಿ ಕೆದಕುವುದು ಪ್ರಯೋಜನ ಇಲ್ಲದ ಮಾತು.

ಈಗ ವಿಸ್ತರಣಾಧಿಕಾರಿಗಳಾಗಿರುವ ಶ್ರೀ ವೀರಣ್ಣ ಶೆಟ್ಟರು ಎಲ್ಲರ ಮೆಚ್ಚುಗೆಗೆ ಪಾತ್ರರಾಗುವಂತೆ ತಮ್ಮ ಪಾಲಿನ ಕೆಲಸ ನಿರ್ವಹಿಸಿದ್ದಾರೆ. ಕೆ. ಎಂ. ಎಫ್. ನಲ್ಲಿ ಇಂತಹ ನಿಷ್ಠಾವಂತ ಅಧಿಕಾರಿಗಳ ಕೊರತೆಯನ್ನು ಉತ್ಪಾದಕರು ಮನಗಂಡಿದ್ದಾರೆ. ಶಾಸಕ ಶ್ರೀ ಗೋವಿಂದೇಗೌಡರು ಈ ಬಾಳೆಹೊನ್ನೂರಿನ ಕೇಂದ್ರದ ಪುನಶ್ಚೇತನಕ್ಕೆ, ಅಧಿಕಾರಿಗಳಿಗೆ ಒತ್ತಡ ತರುವ ಮುಖಾಂತರ, ತಮ್ಮ ಪಾಲಿನ ಕರ್ತವ್ಯವನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ. ಜಿಲ್ಲಾಧಿಕಾರಿಗಳು, ವಿಶೇಷ ಜಿಲ್ಲಾಧಿಕಾರಿಗಳು, ಈ ಭಾಗದ ಎಲ್ಲ ಪಶುವೈದ್ಯರು, ಬಿ. ಡಿ. ಒ. ಅವರುಗಳೂ ಸಹ ಹೆಚ್ಚಿನ ಆಸಕ್ತಿ ವಹಿಸಿ ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ.

'ಮುಂಜಾವು' ಪತ್ರಿಕೆ ಮುಂಚಿನಿಂದಲು ಸಹ ಹಾಲು ಉತ್ಪಾದಕರ ಸಮಸ್ಯೆಗಳಿಗೆ ತುಂಬಾ ಮಾನ್ಯತೆ ಕೊಟ್ಟು, ಸಂಬಂಧಪಟ್ಟವರೆಲ್ಲರೂ ಕಾರ್ಯೋನ್ಮುಖರಾಗುವಂತೆ ಲೇಖನಗಳನ್ನೂ ವರದಿಗಳನ್ನೂ ಪ್ರಕಟಿಸುತ್ತ ಬಂದಿದ್ದು, ಒಂದು ಪತ್ರಿಕೆ ಹೇಗೆ ಜನೋಪಯೋಗಿ ಕೆಲಸವೊಂದು ಯಶಸ್ವಿಯಾಗುವಂತೆ ಮಾಡಬಲ್ಲುದು ಎಂಬುದನ್ನು ನಿರೂಪಿಸಿದೆ.

ಈಗ ಎಲ್ಲರ ಪಾಲಿನ ಕೆಲಸಗಳೂ ಮುಗಿದು ಸಂಪೂರ್ಣ ಜವಾಬ್ದಾರಿ ಹಾಲು ಉತ್ಪಾದಕರ ಮೇಲಿದೆ. ನಾವು ಶಾಸಕರಿಗೆ, ಅಧಿಕಾರಿಗಳಿಗೆ ನೀಡಿದ್ದ ಭರವಸೆಯನ್ನು ಸಾಧಿಸಿ ತೋರಿಸಬೇಕಾಗಿದೆ. ಬಾಳೆಹೊನ್ನೂರಿನಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿಗಳು ತಿಳಿಸಿದಂತೆ ಹಲವಾರು ಬ್ಯಾಂಕ್‌ಗಳವರು ಮಿಶ್ರತಳಿ ಹಸುಗಳಿಗಾಗಿ ಸಾಲ ಕೊಡಲು ಮುಂದೆ ಬಂದಿದ್ದಾರೆ. ಇದರ ಸೌಲಭ್ಯ ಪಡೆದು ಉತ್ಪಾದಕರು ಹೆಚ್ಚು ಹಾಲನ್ನು ಸೊಸೈಟಿಗೆ ಕೊಡುವ ಮುಖಾಂತರ ತಮ್ಮ ಪಾಲಿನ ಕರ್ತವ್ಯ ನಿರ್ವಹಿಸಬೇಕಾಗಿದೆ.

ಇನ್ನು ಮಲೆನಾಡಿನಲ್ಲಿ ಹೈನುಗಾರಿಕೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಆಗಲೇಬೇಕಾದ ಕೆಲಸಗಳನ್ನು, ಸರ್ಕಾರ ಮತ್ತು ಹಾಲು ಉತ್ಪಾದಕರು ಗಮನಿಸಬೇಕಾಗಿದೆ. ಒಂದು ಯೋಜನೆ ಯಶಸ್ಸನ್ನು ಕಾಣಬೇಕಾದರೆ ಅನಿವಾರ್ಯವಾಗಿ ನಾವು ಮುಂದಿನ ವರ್ಷಗಳಲ್ಲಿ ಆಗಬೇಕಾಗಿರುವ ಕೆಲಸಗಳನ್ನು ಈಗಲೇ ರೂಪಿಸಬೇಕಾಗುತ್ತದೆ. ಆದ್ದರಿಂದ ಈ ಕೆಳಗಿನ ಒಂದೆರಡು ಅಂಶಗಳ ಬಗ್ಗೆ ನಾವೆಲ್ಲರೂ ಸ್ವಲ್ಪ ಗಂಭೀರವಾಗಿ ಯೋಚಿಸಬೇಕು.

1. ಮಲೆನಾಡಿನಲ್ಲಿ ಮಾತ್ರ ಕಾಣಬಹುದಾದ "ಮಲೆನಾಡು ಗಿಡ್ಡ" ತಳಿಗಳಿಂದ ನಾವು ಹಾಲು ಉತ್ಪಾದನೆ ನಿರೀಕ್ಷಿಸುವುದು ಸಾಧ್ಯವೇ ಇಲ್ಲ. ಹಲವು ರೈತರು ಅಭಿಪ್ರಾಯಪಡುವಂತೆ ಗೊಬ್ಬರಕ್ಕಾಗಿ ಇವನ್ನು ಸಾಕುತ್ತೇವೆ ಎಂಬುದೂ ಸಹ ಒಪ್ಪಲಾಗದ ವಿಚಾರ. ಅವುಗಳು ಹಾಕುವ ಅಂದಾಜು 200 ಗ್ರಾಂ. ಸಗಣಿಯಲ್ಲಿ ಅರ್ಧಕ್ಕೂ ಹೆಚ್ಚುಭಾಗ ಅವುಗಳ ಗೊರಸುಗಳಿಗೆ ಸಿಕ್ಕಿ ಕೊಟ್ಟಿಗೆಯಿಂದ ಹೊರಗೆ ವ್ಯರ್ಥವಾಗುತ್ತದೆ. ಆದ್ದರಿಂದ ಈ ಸಂತತಿಯನ್ನು ಇಲ್ಲಿಗೇ ನಿಲ್ಲಿಸಿ ಅವುಗಳಿಂದ ಮಿಶ್ರತಳಿಯ ಹಸುಗಳ ಸಂತತಿ ಅಭಿವೃದ್ಧಿಪಡಿಸಬೇಕು.

ಇದಕ್ಕೆ ಸಂಬಂಧಿಸಿದಂತೆ, ರೈತರು "ಮಲೆನಾಡು ಗಿಡ್ಡ" ಜಾತಿಯ ಹೋರಿಗಳನ್ನು ಕಡ್ಡಾಯವಾಗಿ 'ಕಸಿ' ಮಾಡಬೇಕು. (ಅಂದರೆ ಅವುಗಳ ಬೀಜ ತೆಗೆದು ಅವುಗಳಿಂದ ಸಂತಾನಾಭಿವೃದ್ಧಿಯಾಗದಂತೆ ಮಾಡಬೇಕು.) ಈ ಬಗ್ಗೆ ಪಶುವೈದ್ಯ ಇಲಾಖೆ ಸಂಪೂರ್ಣ ಹೊಣೆ ತೆಗೆದುಕೊಂಡು ರೈತರೊಂದಿಗೆ ಸಹಕರಿಸಬೇಕು. ಈ ತಳಿಯ ದನಗಳನ್ನು ಕರೆತಂದು, ಕೃತಕ ಗರ್ಭಧಾರಣೆ ಮಾಡಿಸುವ ಕೆಲಸ ಬಹಳ ಕಷ್ಟವಾದುದರಿಂದ, ಸರ್ಕಾರಿ ಸ್ವಾಮ್ಯದ ಡೈರಿ ಫಾರಂಗಳು ಇತ್ಯಾದಿ ಕಡೆಗಳಿಂದ ಮಿಶ್ರತಳಿ ಹೋರಿಗಳನ್ನು ಉಚಿತವಾಗಿ ರೈತರಿಗೆ ಸರಬರಾಜು ಮಾಡಿ ಅವರಲ್ಲಿ ಇರುವ ದನಗಳ ತಳಿ ಅಭಿವೃದ್ಧಿ ಹೊಂದುವಂತೆ ಮಾಡಬೇಕು. ಹೀಗೆ ಸ್ಥಳೀಯ ಮಿಶ್ರತಳಿ ಸಂತತಿಯೊಂದು ನೈಸರ್ಗಿಕವಾಗಿಯೇ ಅಭಿವೃದ್ಧಿ ಹೊಂದುವುದರಿಂದ ಅತಿ ದುಬಾರಿ ಬೆಲೆಯ ಮಿಶ್ರತಳಿ ಹಸುಗಳನ್ನು ಕೊಳ್ಳಲಾಗದೆ ಹಿಂದುಳಿಯುವ ಅಥವಾ ದುಬಾರಿ ವೆಚ್ಚ ಮಾಡುವ ಪರಿಸ್ಥಿತಿಯು ರೈತರಿಗೆ ತಪ್ಪುತ್ತದೆ. ಇದಕ್ಕಾಗಿ ಈಗ ಕೆಲ ಸಹಸ್ರ ರೂಪಾಯಿಗಳನ್ನು ವ್ಯಯ ಮಾಡಿದರೆ ಮುಂದೆ ಹಲವಾರು ಲಕ್ಷ ರೂಪಾಯಿಗಳು ಉಳಿತಾಯವಾಗುವುದನ್ನು ಸರ್ಕಾರ ಮನಗಾಣಬೇಕು. ಈ ಕೆಲಸ ಕಡ್ಡಾಯವಾಗಿ ಸಮರೋಪಾದಿಯಲ್ಲಿ ನಡೆಯಲೇಬೇಕು.

ಎಂ. ಆರ್. ಕಣ್ಣನ್

ಈ ರೀತಿಯಲ್ಲಿ ಒಂದು ಸುಸಂಘಟಿತ ಕಾರ್ಯಕ್ರಮದಿಂದ ಇನ್ನು ಕೆಲವೇ ವರ್ಷಗಳಲ್ಲಿ ಮಲೆನಾಡಿನಲ್ಲಿ ಹೈನುಗಾರಿಕೆ ಅಗಾಧ ಪ್ರಮಾಣದಲ್ಲಿ ಪ್ರಗತಿ ಹೊಂದುತ್ತದೆ.

2. ಈ ಅಭಿವೃದ್ಧಿಗೆ ಪೂರಕವಾಗಿ ಒಂದು ಯೋಜನೆ ಇಲ್ಲಿದೆ: ರಾಷ್ಟ್ರೀಯ ಡೈರಿ ಸಂಶೋಧನಾ ಕೇಂದ್ರದಲ್ಲಿ (NDRI) "ಪ್ರಯೋಗ ಶಾಲೆಯಿಂದ ಜಮೀನಿಗೆ" (Lab to Land) ಎಂಬ ಒಂದು ಅಂಗಸಂಸ್ಥೆಯಿದೆ. ಸರ್ಕಾರ ಸುಮಾರು 40 ಎಕರೆಯಷ್ಟು ಭೂಮಿ ಒದಗಿಸಿದರೆ ಅಲ್ಲಿ ಈ ವಿಭಾಗದವರು ಒಂದು ಸಮಗ್ರ 'ಹೈನುಗಾರಿಕೆ ಅಭಿವೃದ್ಧಿ ಘಟಕವನ್ನು' ಸ್ಥಾಪಿಸುತ್ತಾರೆ. ಅಲ್ಲಿ ತಳಿ ಅಭಿವೃದ್ಧಿ, ಹಸಿ ಮೇವು ಅಭಿವೃದ್ಧಿ, ಹಾಲಿನ 'ಪಾಶ್ಚೀಕರಣ', ಹಾಲಿನ ಪುಡಿ, ಐಸ್ ಕ್ರೀಂ, ಬೆಣ್ಣೆ–ತುಪ್ಪ ಇತ್ಯಾದಿ ಹಲವು ಉಪ–ಉತ್ಪನ್ನಗಳನ್ನು ಉತ್ಪಾದಿಸುವುದು, ಕೋಳಿ ಸಾಕಣೆ ಮುಂತಾಗಿ ಹೈನುಗಾರಿಕೆಯ ಸರ್ವತೋಮುಖ ಅಭಿವೃದ್ಧಿಯ ಕಾರ್ಯಕ್ರಮ ಕೈಗೊಳ್ಳುತ್ತಾರಲ್ಲದೆ ಅಲ್ಲೇ ಹಲವಾರು ತಜ್ಞರುಗಳಿದ್ದು ರೈತರಿಗೆ ಎಲ್ಲ ಬಗೆಯ ಮಾಹಿತಿ–ಮಾರ್ಗದರ್ಶನಗಳನ್ನು ನೀಡುತ್ತಾರೆ.

ಈಗಾಗಲೇ ಇಂಥ ಒಂದು ಘಟಕವನ್ನು ಹುಲುಕೋಟೆ ಶಾಸಕ ಕೆ. ಹೆಚ್. ಪಾಟೀಲರು ಆಸಕ್ತಿ ವಹಿಸಿ ತಮ್ಮ ಕ್ಷೇತ್ರದ ಜನತೆಗೆ ಕೊಡಿಸಿದ್ದಾರೆಂದು ತಿಳಿದು ಬಂದಿದೆ. ಇನ್ನು ಸ್ಥಾಪಿಸಲು ಅವಕಾಶವಿರುವುದು ಕೇವಲ ಒಂದೋ ಎರಡೋ ಘಟಕ ಮಾತ್ರ ಎನ್ನಲಾಗಿದೆ. ಆದ್ದರಿಂದ ಇಂಥದೊಂದು ಕಾಮಧೇನುವಿನಂಥ ಸೌಲಭ್ಯವನ್ನು ನಮ್ಮ ಶಾಸಕರು, ಜಿಲ್ಲಾಧಿಕಾರಿಗಳು, ವಿಶೇಷ ಜಿಲ್ಲಾಧಿಕಾರಿಗಳು ಮತ್ತಿತರ ಸಂಬಂಧಪಟ್ಟವರು ಗಮನಿಸಿ, ಎಷ್ಟಾದರೂ ಪ್ರಯತ್ನಪಟ್ಟು ಅದನ್ನು ಈ ಪ್ರದೇಶದಲ್ಲಿ ಸ್ಥಾಪಿಸಲು ಶ್ರಮಿಸಬೇಕು. ಇದರಿಂದ ಶೃಂಗೇರಿ, ಕೊಪ್ಪ, ನ. ರಾ. ಪುರ, ತೀರ್ಥಹಳ್ಳಿ—

(3ನೇ ಪುಟ...)

ಮಲೆನಾಡಿನವರಿಗೆ ಆಣಂದ್ ಆದರ್ಶವಾಗಲಿ

ಹಾಲಿನ ಉತ್ಪಾದನೆ ಮತ್ತು ಅದರ ಇತರ ಉತ್ಪನ್ನಗಳಿಗೆ ಸಂಬಂಧಿಸಿದ ಉದ್ಯಮಕ್ಕೆ ಮೂಲ ಹಸುಗಳು. ಆದ್ದರಿಂದ ಹಸುಗಳ ಆರೋಗ್ಯ, ಕ್ಷೀರಾಭಿವೃದ್ಧಿ ಮತ್ತು ವಂಶಾಭಿವೃದ್ಧಿಗೆ ಹಿತಕರವಾಗಬಲ್ಲ ಹವೆ ಹೈನುಗಾರಿಕೆಯ ಬೆಳವಣಿಗೆಗೆ ಬಹಳ ಪ್ರಮುಖವಾಗಿರುತ್ತದೆ.

ಹಸುಗಳು ಚಳಿ ಅಥವಾ ಮಳೆಯನ್ನು ತಡೆದುಕೊಳ್ಳಬಲ್ಲವು. ಆದರೆ ವಿಪರೀತವಾದ ಉಷ್ಣಾಂಶವನ್ನು ತಡೆಯಲಾರವು. ಅದರಲ್ಲೂ ಇದು ಅವುಗಳ ಸಂತಾನಾಭಿವೃದ್ಧಿಯ ಮೇಲೆ (ಬೆದೆಗೆ ಬರುವುದು, ಗರ್ಭ ನಿಲ್ಲುವುದು ಮುಂತಾದ ಅಂಶಗಳ ಮೇಲೆ) ಪ್ರತಿಕೂಲ ಪರಿಣಾಮ ಉಂಟುಮಾಡುತ್ತದೆ.

ನಮಗೆಲ್ಲ ಗೊತ್ತಿರುವಂತೆ, ಮಲೆನಾಡಿನಲ್ಲಿ ಮಳೆ ಜಾಸ್ತಿಯಾದರೂ ಚಳಿ ಮತ್ತು ಬಿಸಿಲು ಬಹಳ ಸುಲಭವಾಗಿಯೇ ತಡೆದುಕೊಳ್ಳಬಹುದಾದ ಮಟ್ಟದಲ್ಲಿವೆ. ಜೊತೆಗೆ ಜಾನುವಾರಿಗೆ ಎಂಥ ಬೇಸಿಗೆಯಲ್ಲೂ ಕುಡಿಯಲು ಏನೇನೂ ನೀರಿಲ್ಲದಂತಾಗುವ ಪರಿಸ್ಥಿತಿ ಮಲೆನಾಡಿನ ಯಾವ ಹಳ್ಳಿಯಲ್ಲೂ ಇಲ್ಲ. ಬದಲಿಗೆ ಇಲ್ಲಿರುವ ವಿಪುಲ ಹಳ್ಳಹೊಳೆಗಳಿಂದಾಗಿ ಯಾವುದೇ ಉದ್ಯಮಕ್ಕೆ ಅತಿ ಮುಖ್ಯವಾಗಿರುವ ನೀರು ಇಲ್ಲಿ ಹೇರಳವಾಗಿ, ಸುಲಭದಲ್ಲಿ ದೊರೆಯುತ್ತದೆ.

(ಬಯಲು ಸೀಮೆಯಲ್ಲಿರುವಂತೆ, ತಿಂಗಳುಗಟ್ಟಲೆ ಒಂದು ಹನಿ ನೀರೂ ಸಿಗದಂಥ, ಹಾಗೂ ಯಾವುದೇ ಉದ್ಯಮಕ್ಕೆ ಬೇಕಾಗುವ ನೀರಿನ ವ್ಯವಸ್ಥೆಗಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಾಗುವಂಥ ಪರಿಸ್ಥಿತಿಗೆ ಹೋಲಿಸಿ.)

ಹಾಗೆಯೇ ಹಸಿಹುಲ್ಲು ಜಾನುವಾರುಗಳಲ್ಲಿ ಹಾಲು ಉತ್ಪತ್ತಿಗೆ ಅತಿಮುಖ್ಯ ಅಂಶವಾಗಿದ್ದು, ಉತ್ತಮ ಜಾತಿಯ ಹುಲ್ಲು ಬೆಳೆಯುವುದಕ್ಕೂ ಮಲೆನಾಡಿನಲ್ಲಿ ಒಳ್ಳೆಯ ಸಾಧ್ಯತೆಯಿದೆ. (ನಿಜವಾಗಿಯೂ, ಎಲ್ಲಾ ರೈತರೂ ತಮಗಿರುವ ಜಾಗದಲ್ಲೇ ಆದಷ್ಟು ಹುಲ್ಲು ಬೆಳೆದು ತಮ್ಮ ಜಾನುವಾರುಗಳಿಗೆ ದಿನವೂ ಸ್ವಲ್ಪ ಹಸಿಹುಲ್ಲು ಹಾಕಬೇಕು.)

ಆದ್ದರಿಂದ ಮಲೆನಾಡಿನ ಹವೆ ಜಾನುವಾರು ಸಾಕಣೆಗೆ ಅತ್ಯುತ್ಕೃಷ್ಟವಾಗಿದೆಯೆಂದು ಇಲ್ಲಿ ಕೆಲಸ ಮಾಡಿದ ಎಲ್ಲಾ ಪಶುವೈದ್ಯರುಗಳೂ ಅಭಿಪ್ರಾಯಪಡುತ್ತಾರೆ. ಹೀಗೆ ಇಷ್ಟೊಂದು ಬಗೆಯ ಮೂಲಭೂತ ಅನುಕೂಲತೆಗಳಿರುವುದರಿಂದ ಇಲ್ಲಿ ವ್ಯವಸ್ಥಿತವಾಗಿ, ಯೋಜನಾಬದ್ಧವಾಗಿ ಹೈನುಗಾರಿಕೆಯನ್ನು ಬೆಳೆಸಿದರೆ ಇಡೀ ಮಲೆನಾಡು ಒಂದು ಸಮೃದ್ಧಿಯ ಯುಗವನ್ನು ಕಾಣಬಹುದು ಎನ್ನುತ್ತಾರವರು.

ಇಂದು ಗುಜರಾತಿನ ಮಹೇಸಾಣಾ ಜಿಲ್ಲೆಯಲ್ಲಿರುವ ಆಣಂದ್ ಎಂಬ ಊರು ಇಡೀ ದೇಶದಲ್ಲೇ ಕ್ಷೀರೋದ್ಯಮದಲ್ಲಿ ಒಂದು ಉನ್ನತ ಸ್ಥಾನ ಹೊಂದಿದೆ. 'ಅಮುಲ್' ಹಾಲಿನ ಪುಡಿ, 'ಅಮುಲ್‌ಸ್ಪ್ರೇ' ಶಿಶು ಆಹಾರ ಮುಂತಾದವುಗಳನ್ನು ಉತ್ಪಾದಿಸುವುದರೊಂದಿಗೆ, ಹಾಲಿನ ಸ್ಥಳೀಯ ಬೇಡಿಕೆಯನ್ನು ಮಾತ್ರವಲ್ಲದೆ, ಬೊಂಬಾಯಿ, ಕಲ್ಕತ್ತಗಳಂಥ ರಾಕ್ಷಸ ನಗರಗಳಿಗೂ ಸಹ ಹಾಲನ್ನು ಇಲ್ಲಿನ ಕ್ಷೀರೋದ್ಯಮವೇ ಪೂರೈಸುತ್ತಿದೆಯಂತೆ.

ಮಲೆನಾಡು ಮತ್ತೊಂದು ಆಣಂದ್ ಅಲ್ಲದಿದ್ದರೂ ಅದರ ಒಂದು ಮರಿಯಷ್ಟಾದರೂ ಯಾಕೆ ಆಗಲಾರದು?

—ಸಿರಿಮನೆ ನಾಗರಾಜ್.

'ಸರಕಾರೀ ಕೆಲಸ'ದ ಹೆಸರಲ್ಲಿ, ಬೊಕ್ಕಸದ ಖರ್ಚಿನಲ್ಲಿ, ಪರಿವಾರ ಸಮೇತರಾಗಿ

'ವೀಐಪಿ'ಗಳ ದುಬಾರಿ ತೀರ್ಥಯಾತ್ರೆಗಳು

ಸರ್ಕಾರದ ಕೆಲಸಕ್ಕೆ ಎಂದು ದಾಖಲೆಗಳಲ್ಲಿ ತೋರಿಸಿ, ಸಂಸಾರ ಸಮೇತರಾಗಿ ಸರ್ಕಾರಿ ಖರ್ಚಿನಲ್ಲಿ ಶೃಂಗೇರಿಯ ತೀರ್ಥಯಾತ್ರೆಗೆ ಬರುವ ಸರ್ಕಾರದ ಸಣ್ಣ-ದೊಡ್ಡ ಅಧಿಕಾರಿ ಗಣ ಒಂದು ಕಡೆಯಾದರೆ, ಇದೇ ರೀತಿಯಲ್ಲಿ ಬರುವ ರಾಜ್ಯ-ಕೇಂದ್ರ ಸರ್ಕಾರಗಳ ದೊಡ್ಡ ದೊಡ್ಡ "ವೀಐಪಿ"ಗಳದೇ ಒಂದು ದೊಡ್ಡ ಕತೆ. ಇವರುಗಳಿಂದ ಸರ್ಕಾರದ ಬೊಕ್ಕಸಕ್ಕೆ ನೇರವಾಗಿ ತಗಲುವ ಖರ್ಚು ಒಂದು ಪಾಲಾದರೆ, ಇವರ ರಕ್ಷಣೆ-ಭದ್ರತೆ, ಊಟೋಪಚಾರ-ವಸತಿ-ಮೋಜು-ಮೇಜವಾನಿ ಇತ್ಯಾದಿಗಳಿಗೆ ಅಂತ ಪರೋಕ್ಷವಾಗಿ ಸರ್ಕಾರಕ್ಕೆ ತಗಲುವ ಖರ್ಚು ಹತ್ತು ಪಾಲು. ಸಾಲದ್ದಕ್ಕೆ ಇವರುಗಳ ಸೇವೆಗಾಗಿ ವಿವಿಧ ಪ್ರಮುಖ ಇಲಾಖೆಗಳೆಲ್ಲ ಟೊಂಕ ಕಟ್ಟಿ ನಿಲ್ಲುವುದರಿಂದ ಜನ ಸಾಮಾನ್ಯರ ಕೆಲಸಗಳು ಅಷ್ಟಷ್ಟು ದಿನ ಸ್ಥಗಿತಗೊಳ್ಳುವುದು, ಸಂಚಾರ-ಸಾರಿಗೆ ವ್ಯವಸ್ಥೆಗಳು ಅಸ್ತವ್ಯಸ್ತವಾಗುವುದು ಇತ್ಯಾದಿ ಉಪ-ದುಷ್ಪರಿಣಾಮಗಳಂತೂ ಲೆಕ್ಕಕ್ಕೇ ಸಿಕ್ಕದಷ್ಟು.

ಹಗಲು ದರೋಡೆಯಂಥ ಈ ಅನ್ಯಾಯದ ಸರಮಾಲೆಯ ಮೇಲೆ ಒಂದು ಕ್ಷ-ಕಿರಣ ಬೀರುವ ಲೇಖನಮಾಲೆಯ ಎರಡನೇ ಕಂತು ಇದು.

ಸಮೀಕ್ಷಕ : ಕಲ್ಕುಳಿ ವಿಠಲ ಹೆಗ್ಡೆ

(14-9-86ರ ಸಂಚಿಕೆಯಿಂದ)

'ವೀಐಪಿ'ಗಳೆಂಬ ಈ ಬಿಳಿಯಾನೆಗಳಿಗೆ ಗೌರವ, ರಕ್ಷಣೆ ಅಂತ ಪೋಲೀಸು ಇಲಾಖೆ ತನ್ನ ಪ್ರಾಣಾ ತೇದರೆ (ತನ್ನ ಮಾನವನ್ನೂ ಸಹ), ಅವರುಗಳ ಊಟ-ವಸತಿಯ ಜವಾಬ್ದಾರಿ ಹೆಚ್ಚಾಗಿ ತಾಲ್ಲೂಕಿನ ಯಜಮಾನ ಇಲಾಖೆಯಾದ ನಮ್ಮ ರೆವಿನ್ಯೂ ಇಲಾಖೆಯ ಹಣೇಬರಹಕ್ಕೇ ಕಟ್ಟಿದ್ದು.

ಅನೇನು ಸಾಮಾನ್ಯ ಊಟ ಅಂತೀರಾ? ಅವರ ಊಟದ ಪಟ್ಟೀನ ಸಾಮಾನ್ಯ ಜನ ಏನಾದ್ರೂ ನೋಡಿದರೆ ಹಾಗೇ ಹೊಟ್ಟೆ ತುಂಬಿ ಸುಸ್ತಾಗಿ ಹೋಗ್ಬೇಕು; ಶೃಂಗೇರಿ ತಾಲ್ಲೂಕಿನ ಶ್ರೀಮಂತರ್‍ಯಾರೂ ಎಂದೂ ಉಂಡಿರದಂಥಾ, ಕಂಡೂ ಇರದಂಥಾ ಊಟ ಅದು!

15 ದಿನ ಮುಂಚೇನೇ ಎಲ್ಲಿಂದಲೋ ಕೋಳಿ ತರಿಸಿ, ಇವರ ಮೇವಿಗಾಗಿ ಅದನ್ನು ಮೇವು ಹಾಕಿ ಸಾಕಿ, ಲಕ್ಕವಳ್ಳಿ ಅಣೆಕಟ್ಟೆಯಿಂದ ಅದ್ಯಾವುದೋ ಜಾತಿಯ ಮೀನುಗಳನ್ನು ತರಿಸಿ, ಹಾಲು-ಮೊಸರು, ಕಾಫೀ-ಟೀ ಪುಡಿ ಎಲ್ಲಾ ಎಲ್ಲಿಂದಲ್ಲೋ ಬರಬೇಕು, ಅವುಗಳ ಹೆಸರಾದರೂ ಈತನಕ ಕೇಳಲಿಲ್ಲ, ಅದ್ಯಾವುದೋ 'ಬಾಸುಮತಿ' ಅಕ್ಕಿಯಂತೆ.... ಇಷ್ಟಿದ್ದರೆ 'ಮಜಾ' ಅಂತಾರ್‍ಯೆ?. 'ಎಣ್ಣೆ', ಸಿಗರೇಟು ಎಲ್ಲಾ ಪರದೇಶದ್ದು, ಒಂದೊಂದರ ಸಾವಿರ ಅಂತೆ ಒಂದು ಬಾಟ್ಲಿಗೆ! **ಸದ್ಯ ಸಂಸಾರ - ಹೆಂಡ್ರನ್ನ ಕರ್‍ಕೊಂಬರೋದ್ರಿಂದ ಆಯ್ತು, ಇಲ್ಲಾಂದ್ರೆ 'ಅದೊಂದಕ್ಕೆ' ಯಾರನ್ನು ಬಲಿ ಕೊಡಬೇಕಾಗ್ತಿತ್ತೋ ಗೊತ್ತಿಲ್ಲ!** "ಅದೇನೂ ಪರವಾಯಿಲ್ಲ ಸಾರ್!" ಅಂತಾರೆ ವ್ಯವಸ್ಥೆಗಾರರು. ಇಲ್ಲಿ ಸಿಕ್ದೇ ಇರೋದೆಲ್ಲಾ ಅಲ್ಲಿಂದ್ಲೇ ಬರುತ್ತಂತೆ, ಹಣ ಕೊಟ್ಬಿಟ್ರೆ ಆಯ್ತಂತೆ!

ಇಷ್ಟಕ್ಕೆ ಮುಗೀತೂ ಅಂತೀರಾ? ಅವರದ್ದು ಮುಗುದ್ರೂ ಅವ್ರ ಪರಿವಾರದ್ದು ಮುಗೀಬೇಕಲ್ಲ. (ಅವ್ರದ್ದೇ ಒಂದು ಕೈ ಜೋರಾಗಿರೋದೂ ಇದೆ.) ಅವರನ್ನೆಲ್ಲ ಅವರವರ ಯೋಗ್ಯತೆಗೆ, ಬ್ರ್ಯಾಂಡ್‌ಗಳಿಗೆ ಸರಿಯಾಗಿ ನೋಡ್ಕೊಂಡು 'ಸೈ' ಎನಿಸ್ಕೋಳೋ ಹೊತ್ತಿಗೆ, ಇವರಿಗೂ ಒಂದು ಬಾಟ್ಲಿ ಹಾಕದಿದ್ದರೆ ನಿದ್ದೆ ಬರೋ ಹಾಗಿಲ್ವಂತೆ.

ಇಷ್ಟರ ಮೇಲೆ, ಆ ಪುಣ್ಯಾತ್ಮ ಬಂದು ಹೋಗೋ ವರೆಗಿನ ಎಲ್ಲಾ ವ್ಯವಸ್ಥೆಯ ಪೂರ್ಣ 'ನೈತಿಕ ಜವಾಬ್ದಾರಿ'ಯೂ ಈ ಯಜಮಾನ ಇಲಾಖೇದೇ ಆಗಿರುತ್ತೆ. ಯಾವ ಇಲಾಖೇದು ಹೆಚ್ಚುಕಮ್ಮಿ ಆದ್ರೂ ಕಡೇಗೆ ಅದರ ಬಯ್ಗುಳ ಸಿಗೋದು ಇವ್ರಿಗೇ. "ಯಾವ ಕಾಲು ಜಾರಿದರೂ ಅಂಡಿಗೆ ಮಾರ್" ಅಂದ ಹಾಗೆ.

ಇಷ್ಟಾದ ಮೇಲೆ, ಈ ಮದ್ದಾನೆಗಳ ಪದಾಘಾತಕ್ಕೆ ಸಿಗೋ ಇನ್ನೊಂದು ಮುಖ್ಯವಾದ ಇಲಾಖೆ ಅಂದ್ರೆ ಲೋಕೋಪಯೋಗಿ ಇಲಾಖೆ. ಪ್ರವಾಸಿಮಂದಿರ, ರಸ್ತೆಗಳು ಎಲ್ಲ ಇದರ ಅಧೀನ ತಾನೆ? ಇಂಥ ಯಾವನೋ ಒಬ್ಬ 'ದೊಡ್ಮನಿಷ್ಯ' (ವಿಐಪಿ) ಬರ್‍ತಾನೇಂದ್ರೆ ಟೇಬೀಗೆ ಒಂದ್ಸಾರಿ ಸುಣ್ಣ-ಬಣ್ಣ, ಬಿಸಿ ನೀರ ನಲ್ಲೀಲಿ ಬಿಸಿನೀರು, ತಣ್ಣೀರ ನಲ್ಲೀಲಿ ತಣ್ಣೀರು ಬರ್‍ಸಿ, ಬಟರ್‌ಪೇಪರ್ ತರ್‍ಸಿ ಅವ್ರವ್ರ ಅಳತೆಗೆ ಸರಿಯಾಗಿ ಕತ್ತರ್‍ಸಿಟ್ಟು .... ಟೇಬಿಯ ದೊಡ್ಮನ್ಸರ ಕೋಣೆಗಳಲ್ಲಿ ಸೌಕರ್ಯಕ್ಕೇನು ಕಮ್ಮಿ ಅಂತ ಅಲ್ಲ, ಆದ್ರೂ ಕೆಲವರಿಗೆ ಅವ್ರವ್ರ ಸೈಜಿಗಾಗುವಂಥದೇ ಬಾಗಿಲೋ, ಕುರ್ಚೀನೋ ಮಂಚಾನೋ ಆಗ್ಬೇಕು. ಕೆಲವರ ಸೈಜು ಎಲ್ಲಾರ ಸೈಜಿದ್ಹಾಂಗಿರೋಲ್ಲ! ಚೂರು ಪಾರು ವ್ಯತ್ಯಾಸಾನ ಹೇಗೋ ಅಡ್ಜಸ್ಟ ಮಾಡಿಕೊಂಡ್ರೆ ಅವನ್ನ ವೀಐಪಿ, 'ಸ್ಟೇಟ್ ಗೆಸ್ಟ' ಅಂತಾರ್‍ಯೆ? ಆದ್ರಿಂದ ಅದೆಲ್ಲ ಅವ್ನ ಸೈಜಿಂದೇ ಆಗ್ಲೇಬೇಕು.

ನಮ್ಮ ಸ್ನೇಹಿತರೊಬ್ಬರ ಜೋಕು- ನಮ್ಮ ಆಗುಂಬೆ ರೋಡು ಫುಲ್ ಆಫ್ ಬಟನ್ಸ್ ಮಾರಾಯ. ಅಂದ್ರೆ ಗುಂಡಿ ಬಿದ್ದಿದೆ ಅಂತ. ಈ 'ಬಟನ್ಸ್'ಗಳಿಗೆಲ್ಲ ಮಣ್ಣು ಮೆತ್ತಿ ಕಾರು ಮೇಲೆ-ಕೆಳಗೆ ಆಗಿ ಮೈಕೈ ನೋಯದಂತೆ ಮಾಡ್ಬೇಕು. ಎರಡು ದಿನ ಬಿಟ್ಟು, ಆ ಮಣ್ಣು ಕೆಸರಾಗಿ ಇಲ್ಲ ಧೂಳಾಗಿ, ಅಲ್ಲಿ ಬೇರೆ ವಾಹನಗಳು ಓಡಾಡುವಾಗ ನಮಗೆ ಕೆಸರು ನೀರಿನ ಅಭಿಷೇಕ ಅಥವಾ

(4ನೇ ಪುಟಕ್ಕೆ)

ಪದ್ಯದಂಕಣ

ನಾನು ಕತ್ತಲನ್ನು ಪ್ರೀತಿಸುತ್ತೇನೆ

ನಾನು ಕತ್ತಲನ್ನು ಪ್ರೀತಿಸುತ್ತೇನೆ
ಕತ್ತಲಲ್ಲಿ ವಟಗುಟ್ಟುವ
ಕಪ್ಪೆಯ ಧ್ವನಿ
ಕುಹೂ, ಕೂಗುವ ರಾತ್ರಿ ಹಕ್ಕಿ
ಮುಸುಕಿನೊಳಗೆ
ಗುದ್ದಾಡುವ ಕನಸುಗಳು
ನಾನು ಕತ್ತಲನ್ನು ಪ್ರೀತಿಸುತ್ತೇನೆ

ಈಗ ಕಾಗೆ ಕೂಗಿ ಬೆಳಗಾಗುತ್ತದೆ—
ಗಡಿಬಿಡಿಯ ಬದುಕು
ನೋವುಣ್ಣುತ್ತಿದ್ದರೂ
ನಗೆಮೊಗದ ವೇಷ
ಮಾನವೀಯತೆಯ
ಮುಸುಕಿನಲ್ಲಿ
ದಾನವತೆಯ ಓಲಗ
ಸೂರ್ಯೋದಯದಿಂದ
ಅಸ್ತಮಾನದವರೆಗೂ
ಅರ್ಥವಾಗದ ಶಬ್ದಗಳು
ನಾನು ಕತ್ತಲನ್ನು ಪ್ರೀತಿಸುತ್ತೇನೆ

—ಹು. ವಾ. ಶ್ರೀವತ್ಸ.

ಕೊಪ್ಪ: ವಿದ್ಯುಚ್ಛಕ್ತಿ ಸೇವೆ ಸುಧಾರಣೆ ಬಗ್ಗೆ ಸಲಹೆಗಳು, ಭರವಸೆಗಳು

ಕೊಪ್ಪದಲ್ಲಿ ವಿದ್ಯುಚ್ಛಕ್ತಿ ವೈಫಲ್ಯಗಳನ್ನು ಕಡಿಮೆ ಮಾಡುವುದು ಮತ್ತು ವಿದ್ಯುಚ್ಛಕ್ತಿ ತೊಂದರೆಯಾದಾಗ ದೂರು ನೀಡುವ ಬಗೆಗಿನ ಸೌಲಭ್ಯಗಳನ್ನು ಹೆಚ್ಚಿಸುವ ಕುರಿತು ಪೌರ ಹಿತ ರಕ್ಷಣಾ ಸಮಿತಿಯ ಗೌ|| ಕಾರ್ಯದರ್ಶಿ ಎಂ. ಆರ್. ಕಣ್ಣನ್ ಮತ್ತು 'ಮುಂಜಾವು' ಸಂಪಾದಕರು ಸೆ. 23 ರಂದು ಕೊಪ್ಪದ ಕ. ವಿ. ಮಂ. ಇಂಜಿನಿಯರ್ ಕೇಶವಮೂರ್ತಿಯವರನ್ನು ಭೇಟಿ ಮಾಡಿ ಚರ್ಚಿಸಿದರು.

ಮೇಲಿನಪೇಟೆಯಲ್ಲಿ ವಿದ್ಯುಚ್ಛಕ್ತಿಯ ದೂರುಗಳನ್ನು ಸ್ವೀಕರಿಸಿ, ರಿಪೇರಿ ಮಾಡಿಕೊಡಲು ಪ್ರತ್ಯೇಕವಾಗಿ ಒಬ್ಬ ಲೈನ್‌ಮನ್ ಅನ್ನು ನಿಯುಕ್ತಿಗೊಳಿಸುವುದು ಇಲಾಖೆಯ ನಿಯಮಗಳನ್ವಯ ಸಾಧ್ಯವಾಗುವುದಿಲ್ಲ. ಆದರೆ ಬಳಕೆದಾರರ ಕೋರಿಕೆಯಂತೆ, ಬಸ್‌ಸ್ಟ್ಯಾಂಡ್ ಹಿಂಭಾಗದಲ್ಲಿ ಪುರಸಭೆಯಿಂದ ಒಂದು ಕೊಠಡಿಯನ್ನು ಬಾಡಿಗೆಗೆ ಪಡೆದು (ಪಂಡಿತರ ತರಕಾರಿ ಅಂಗಡಿಯ ಎದುರು) ಅಲ್ಲಿ ಬೆಳಗಿನ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಒಬ್ಬ ಲೈನ್‌ಮನ್ ಅನ್ನು ನೇಮಿಸಿದ್ದು, ಅವರು ದೂರುಗಳಿಗೆ ಸಂಬಂಧಪಟ್ಟ ಎಲ್ಲ ವಿವರಗಳನ್ನೂ ಬರೆದುಕೊಂಡು, ಡ್ಯೂಟಿಯ ಲೈನ್‌ಮನ್‌ಗಳಿಗೆ ತಿಳಿಸುತ್ತಾರೆ. ಆದರೆ ಅವರಿಗೆ ಫೋನ್ ಒದಗಿಸುವ ಸೌಕರ್ಯ (ನಿಯಮಗಳನ್ವಯ) ಇಲ್ಲವಾದ್ದರಿಂದ ಸಾರ್ವಜನಿಕರು ಅಲ್ಲಿಗೇ ಹೋಗಿ ದೂರು ಕೊಡಬೇಕಾಗುತ್ತದೆ. ಆದ್ದರಿಂದ ಶ್ರೀಯುತ ನಾರಿದಾಸ್ ಜೈನ್‌ರವರನ್ನೂ ಕ್ಲಾಸಿಕ್ ಕ್ರೀಮ್ ಪಾರ್ಲರ್‌ನವರನ್ನೂ ಈ ವಿಚಾರದಲ್ಲಿ ಯಾರಾದರೂ ಫೋನ್ ಮಾಡಿದಲ್ಲಿ ಸಹಕಾರ ನೀಡುವಂತೆ ವಿನಂತಿಸಿಕೊಂಡಿದ್ದು ಅವರುಗಳು ಸಾಧ್ಯವಿದ್ದಷ್ಟು ಸಹಕರಿಸುತ್ತಿದ್ದಾರೆ. ಆದ್ದರಿಂದ ವಿದ್ಯುತ್ ಬಳಕೆದಾರರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕೇಶವ ಮೂರ್ತಿ ಹೇಳಿದರು.

ದೀಪ ಹಚ್ಚಿ ಸ್ವಲ್ಪ ಹೊತ್ತಾಗುವವರೆಗೆ ಅಂದರೆ ಸುಮಾರು ರಾತ್ರಿ 8 ಗಂಟೆಯವರೆಗೆ ಈ ಲೈನ್‌ಮನ್ ಅಲ್ಲಿ ಇರುವಂತೆ ಅವರ ಡ್ಯೂಟಿಯನ್ನು ವ್ಯವಸ್ಥೆ ಮಾಡಬೇಕು ಹಾಗೂ ಪ್ರತಿದಿನ ರಾತ್ರಿ 7.30-8 ಗಂಟೆಯ ಹೊತ್ತಿಗೆ ಡ್ಯೂಟಿ ಲೈನ್‌ಮನ್‌ಗಳು ಮೇಲಿನ ಪೇಟೆ ಟ್ರಾನ್ಸ್‌ಫಾರ್ಮರ್ ವರೆಗೆ ಬಂದು ಏನಾದರೂ ದೋಷಗಳಿವೆಯೆ ಎಂದು ಪರೀಕ್ಷಿಸಿ ಇದ್ದಲ್ಲಿ ರಿಪೇರಿ ಮಾಡಿ ಹೋಗಬೇಕು ಎಂಬ ಎರಡು ಸಲಹೆಗಳನ್ನೂ ಅವರು ಒಪ್ಪಿಕೊಂಡು ಅದರಂತೆ ವ್ಯವಸ್ಥೆ ಮಾಡುವ ಭರವಸೆ ಕೊಟ್ಟರು. ಅಲ್ಲದೆ ಮೇಲಿನಪೇಟೆಯಲ್ಲಿ ಒಂದೇ ಲೈನಿಗೆ 'ಲೋಡ್' ಹೆಚ್ಚಾಗಿದ್ದು ಈ ಅಸಮತೋಲನವನ್ನು ಸರಿಪಡಿಸಲು ಹಾಗೂ ವೀರಭದ್ರ ಸ್ವಾಮಿ ರಸ್ತೆಯಲ್ಲೂ ಲೈನಿನ ಸಾಮರ್ಥ್ಯ ಹೆಚ್ಚಿಸಲು

(4ನೇ ಪುಟಕ್ಕೆ)

ಓದುಗರ ಪತ್ರ

ಹಿಂದಿ ಶಿಕ್ಷಕರಿಲ್ಲ, ಪುಸ್ತಕವೂ ಇಲ್ಲ !

ಮಾನ್ಯರೇ,

ಕೊಪ್ಪ ತಾಲ್ಲೂಕು ಕುದ್ರೆಗುಂಡಿ ಪ್ರೌಢಶಾಲೆಯಲ್ಲಿ ತರಗತಿಗಳು ಪ್ರಾರಂಭವಾಗಿ 4 ತಿಂಗಳು ಕಳೆಯುತ್ತಾ ಬಂದರೂ ಹಿಂದಿ ಶಿಕ್ಷಕರಿಲ್ಲದೆ, ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಅದರಲ್ಲೂ ಪಬ್ಲಿಕ್ ಪರೀಕ್ಷೆ ಎದುರಿಸುವ 10ನೇ ತರಗತಿಯ ವಿದ್ಯಾರ್ಥಿಗಳಿಗೆ ತೊಂದರೆ ಇನ್ನೂ ಹೆಚ್ಚು.

ಸಾಲದ್ದಕ್ಕೆ ಇಲ್ಲಿ ವಿದ್ಯಾರ್ಥಿಗಳಿಗೆ ಹಿಂದಿ ಪುಸ್ತಕವೇ ಇದುವರೆಗೆ ದೊರೆತಿಲ್ಲ. ಆದ್ದರಿಂದ ಸಂಬಂಧಪಟ್ಟವರು ಈ ಬಗ್ಗೆ ಗಮನಹರಿಸಿ, ಆದಷ್ಟು ಬೇಗ ಶಿಕ್ಷಕರನ್ನು ನೇಮಿಸಬೇಕಾಗಿ ಹಾಗೂ ಪುಸ್ತಕ ಒದಗಿಸಲು ಕ್ರಮ ಕೈಗೊಳ್ಳಬೇಕಾಗಿ ಕೋರುತ್ತೇನೆ.

-ವಿದ್ಯಾರ್ಥಿಗಳ ಪರವಾಗಿ,
ವೈ. ಎಸ್. ರಾಧಾಕೃಷ್ಣ,
ಎಡಗೆರೆ-ಸೀತೂರು.

ಮಲೆನಾಡಿನಲ್ಲಿ ಕ್ಷೀರೋದ್ಯಮ

(2ನೇ ಪುಟದಿಂದ)

ಕನಿಷ್ಠ ಈ 4 ತಾಲ್ಲೂಕುಗಳಿಗಾದರೂ ಒಂದು ವರದಾನವಾದಂತಾಗುತ್ತದೆ. ಜನಪ್ರತಿನಿಧಿ, ಅಧಿಕಾರಿಗಳು ಮತ್ತು ರೈತರ ಸಂಘಟಿತ ಪ್ರಯತ್ನ ಮತ್ತು ನಿಕಟ ಸಹಯೋಗದಿಂದ ಇಂಥದೊಂದು ಕಾರ್ಯ ಸಾಧಿಸುವುದು ಅಸಾಧ್ಯವೇನಲ್ಲ.

ಮೊಟ್ಟಮೊದಲಿಗೆ ಇದಕ್ಕಾಗಿ ಅನುಕೂಲವಾದ 40 ಎಕರೆಯಷ್ಟು ಪ್ರದೇಶವನ್ನು ಗುರುತಿಸಿ ಮಂಜೂರು ಮಾಡುವುದರೊಂದಿಗೆ ಎನ್ ಡಿ ಆರ್ ಐ ಯನ್ನು ಈ ಬಗ್ಗೆ ಸಂಪರ್ಕಿಸಿ ಸೂಕ್ತ ಕ್ರಮ ಕೈಗೊಳ್ಳುವುದು ಈಗ ತುರ್ತಾಗಿ ಆಗಬೇಕಾಗಿದೆ.

ದುಡಿವವರ ಶ್ರಮದ ಪ್ರತಿಫಲ ವಿಐಪಿಗಳ ತೀರ್ಥಯಾತ್ರೆಗೆ ಪೋಲು

(3ನೇ ಪುಟದಿಂದ)
ಇವರ ಪಾದ ಧೂಳಿನ ಸ್ನಾನ.

ಈ ಇಲಾಖೆಯು ಇಸ್ನೂ ಒಂದು ಘನ ಕಾರ್ಯ ಹೇಳ್ಲೇ ಬೇಕು. ಪೇಟೆ ಮಧ್ಯೆ ಹಂಪ್ (ರಸ್ತೆ ತಡೆ) ಮಾಡಿ ವರ್ಷ ಎಷ್ಟಾದರೂ ಅದರ ಮೇಲೆ ಎಷ್ಟು ವಾಹನಗಳು ಹಾರಿ ಬೆನ್ನು ಮುರ್ಕಂಡು, ವಾಹನದ ಬ್ಲೇಡು ಮುರ್ಕಂಡು ಹೋಗಿದ್ದಾರೋ ಗೊತ್ತಿಲ್ಲ. ಆದರೆ ಇಂಥವನ್ಯಾವನೋ ಬರ್ತ್ತಾನೆ ಅಂದಾಗ ರಾತ್ರಿಯಾಗಲಿ ಮಳೆಯಾಗಲಿ, ಅದಕ್ಕೆ ನಾಲ್ಕು ಬಣ್ಣದ ಪಟ್ಟೆ ಎಳೀತಾರೆ. ಅದಕ್ಕೆ ಇನ್ನೊಂದ್ಸಾರಿ ಬಣ್ಣದ ಪಟ್ಟೆ ಕಾಣಬೇಕಾದರೆ ಇನ್ನೊಬ್ಬ ಯಾವೊನೋ ಇಂಥ ದೊಡ್ಮನ್ಸನ ಆಗಮನವಾಗ್ಬೇಕು. ಮೊನ್ನೆ ಮೊನ್ನೆ ಹೀಗೆ ರಾತ್ರಿ ಗಡಿಬಿಡೀಲಿ ಬಣ್ಣ ಬಳಿದು ಅದಕ್ಕೆ ಕಲ್ಲು ಅಡ್ಡ ಇಟ್ಟಿದ್ದರ ಮೇಲೆ ರಾತ್ರಿ ಟೂರಿಸ್ಟ್ ಕಾರೊಂದು ಬಂದು ಬಡಿದು ಅದು ಉಳಿದದ್ದೇ ಹೆಚ್ಚು ಅಂತಾರೆ ನೋಡಿದ ಜನ. ಅಂತೂ ಯಾರಿಗೇನಾದರಾಗಲಿ, ನಮಗಂತೂ ಹಂಪಿಗೆ ಬಣ್ಣ ಆಗಿದೆ. ಇನ್ನು ಸದ್ಯಕ್ಕೆ ಬಿಸಾತಿಲ್ಲ.

* * *

ಇಷ್ಟೆಲ್ಲ ಯಾಕಪ್ಪಾ ಹೇಳ್ಬೇಕಾಯ್ತು ಅಂದ್ರೆ, ಈ ಮಹಾನುಭಾವರೆಲ್ಲ ಬಂದು ಸಾಧಿಸೋ ಪುರುಷಾರ್ಥವಾದರೂ ಏನು? ಅಂತ. ಪ್ರದೇಶ ಸಮಾಚಾರದಲ್ಲಿ ಅವರ ದೊಡ್ಡಸ್ತಿಕೆಗೆ (ಅಂತಸ್ತಿಗೆ) ತಕ್ಕ ಒಂದು ಸುದ್ದಿ — ಇಂಥವರು ಶೃಂಗೇರಿಗೆ ಭೇಟಿ ಕೊಟ್ಟಿದ್ದರು, ಶಾರದಾಂಬೆಗೆ ಇಷ್ಟೆಲ್ಲ ವಿಶೇಷವಾಗಿ ಬಂದವರು ವಿಶೇಷ ಪೂಜೇನೇ ಸಲ್ಲಿಸಬೇಕು ತಾನೆ, ಅದಕ್ಕೆ ವಿಶೇಷ ಪೂಜೆ ಸಲ್ಲಿಸಿದರು, ಸ್ವಾಮಿಗಳ ಭೇಟಿ ಮಾಡಿ ಉದ್ದಂಡ ನಮಸ್ಕಾರ ಮಾಡಿದರು ಇತ್ಯಾದಿ ಬರುತ್ತೆ. ಆಯಿತು. ಆದರೆ ಜನ ಸಾಮಾನ್ಯರ ಪ್ರಶ್ನೆ ಇಷ್ಟು: ಇವರು ಸ್ವಾಮಿಗಳಿಗೆ, ದೇವರುಗಳಿಗೆ ಅಡ್ಡ ಬೀಳೋಕೇಂತ ಇಷ್ಟೆಲ್ಲ ಜನಕ್ಕೆ ತೊಂದರೆ, ಜನರ ಹಣ ಖರ್ಚು ಎಲ್ಲ ಮಾಡೋ ಬದಲು ಸ್ವಾಮಿಗಳನ್ನೇ ಯಾಕೆ ಅಲ್ಲಿಗೆ ಕರಸ್ಕೋಬಾರ್ದು? ತಿಂಗಳಿಡೀ ಬೇಕಾದರೆ ಕಾಲು ಹಿಡ್ಕೊಂಡು ಬಿದ್ದಿರಲಿ. ಅದು ಬಿಟ್ಟು, ಸರ್ಕಾರದ ಹಣ ಖರ್ಚು ಮಾಡೋಕೆ ಅವಕಾಶ ಇದೆ ಅಂತ ಜನರ ದುಡಿಮೆ ಹಣಾನ ಹೀಗೆ ಪೋಲು ಮಾಡೋದು ಎಲ್ಲೀ ತನಕ ?

ಇಂಥ ಸಂದರ್ಭಗಳಲ್ಲಿ ಸರ್ಕಾರದ ಹಣದ ಪ್ರತ್ಯಕ್ಷ ಖರ್ಚು ಮಾತ್ರವಲ್ಲದೆ ವಿವಿಧ ಅಧಿಕಾರಿಗಳೂ ಸಾಕಷ್ಟು ಹಣ ಖರ್ಚು ಮಾಡ್ತಾರೆ. (ಅಥವಾ ವ್ಯಾಪಾರಿಗಳು, ಕಂಟ್ರಾಕ್ಟರು ಮುಂತಾದವರಿಂದ ಖರ್ಚು ಮಾಡಿಸ್ತಾರೆ.) ಅವರೇನು ಅದನ್ನು ಜನರಿಂದ ಒಂದಲ್ಲೊಂದು ರೂಪದಲ್ಲಿ ವಸೂಲು ಮಾಡದೆ ಬಿಡ್ತಾರೆಯೇ? ಒಬ್ಬ ಅಧಿಕಾರಿ ಹೇಳುತ್ತಿದ್ದರು.

"....ಹೌದು ಸ್ವಾಮಿ, ಎಲ್ಲರೂ ಹೇಳ್ತಾರೆ-ಲಂಚ ತಗೋಬಾರ್ದು, ಪ್ರಾಮಾಣಿಕರಾಗಿರ್ಬೇಕು, ಹಾಗಿರ್ಬೇಕು, ಹೀಗಿರ್ಬೇಕು ಅಂತ. ನೀವು ಪೇಪರ್ನೋರೂ ಬರ್ದು ಮಾನ ಕಳೀತೀರಿ. ಆದರೆ ಆಫೀಸ್ ಇನ್ ಸ್ಪೆಕ್ಷನ್ನೂ ಅದೂ-ಇದೂ ಅಂತ ನಮ್ಮ ಇದ್ದ ಬದ್ದ ಅಧಿಕಾರಿಗಳೆಲ್ಲ ಈ ಪುಣ್ಯಕ್ಷೇತ್ರ ಯಾತ್ರೆಗೆ ತಮ್ಮ ತಮ್ಮ ಸಂಸಾರ-ಪರಿವಾರಗಳ ಸಮೇತ ಬರ್ತಾರಲ್ಲ. ಅವರನ್ನೆಲ್ಲ ನಾವೇ 'ನೋಡ್ಕೋ' ಬೇಕಲ್ಲ. ಅದಕ್ಕೆ ಎಷ್ಟು ಖರ್ಚಾಗುತ್ತೆ? ಇದನ್ನೆಲ್ಲ ಎಲ್ಲಿಂದ ಭರಿಸೋದು 'ನಮಗೂ ಸಂಸಾರ ಮಕ್ಳು-ಮರಿ ಅಂತ ಇಲ್ವೇ?....'

ಈ ಸಮಸ್ಯೆಗಳ ಜಾಲ ಹೆಬ್ಬಾವಿನಂತೆ ನಮ್ಮನ್ನು ಸುತ್ತಿಕೊಳ್ಳುವ ಈ ವ್ಯವಸ್ಥೆ ಕೊನೆಗೊಳ್ಳುವುದೆಂದು? ಈ ಬಗ್ಗೆ ನಮ್ಮ ಜನ ಯೋಚಿಸ್ತಾರೆಯೇ? ಶೋಷಣೆ ಮಾಡೋಕೆ ಅಂತ್ಲೇ ಹುಟ್ಟಿದ ದೇವರು; ಅದೃಷ್ಟ ಅಂತಲೇ ಮರೆಯೋ ಈ ಜನ, ಇವರಿಗೆಲ್ಲ ಇನ್ನೆಷ್ಟು ದಿನ ನಮ್ಮ ದುಡಿಯೋ ಜನ ಹೊಟ್ಟೆ ತುಂಬಿಸ್ಬೇಕು? ಇಂಥ ಒಂದೊಂದು ಪ್ರವಾಸದಿಂದ ಒಬ್ಬೊಬ್ಬ ದೊಡ್ಮನುಷ್ಯ ಒಂದೊಂದ್ಸಲಕ್ಕೆ 2 ಲಕ್ಷದಿಂದ 4 ಲಕ್ಷ (ಹೆಲಿಕಾಪ್ಟರ್ ಆದರೆ) ರೂಪಾಯಿ ಪೋಲು ಮಾಡ್ತಾನಲ್ಲ, ಇದನ್ನೆಲ್ಲ ಬೀದಿ ಬದಿ ನಿಂತು ಇವನು ಬರುವಾಗ ಪೋಲೀಸ್ನೋರ ಕೈಯಿಂದ ಹಚಹಚ ಅನ್ನಿಸ್ಕೊಂಡು ಬೇಸರವಾದಾಗ ಮಾತ್ರ ಶಾಪ ಹಾಕ್ಕೊಂಡು ಮನೆಗೆ ಹೋಗಿ ಮರೆಯೋ ಬದಲು ಇಂಥದೊಂದು ದುಷ್ಟ ವ್ಯವಸ್ಥೆಯ ಬದಲಾವಣೆ ಬಗ್ಗೆ ನಮ್ಮ ಜನ ಸ್ವಲ್ಪ ಆಳವಾಗಿ ಯೋಚಿಸುವುದು, ಪ್ರಾಮಾಣಿಕವಾಗಿ ಆಸೆಪಡುವುದು ಮಾಡಲಿ ಎಂದು ನನ್ನ ಹಾರೈಕೆ. ●

(ವಿ.ಐ.ಪಿ. = ವೆರಿ ಇಂಪಾರ್ಟೆಂಟ್ ಪರ್ಸನ್ = ಅತಿ ಮುಖ್ಯ ವ್ಯಕ್ತಿ, ಗಣ್ಯ, 'ದೊಡ್ಮನುಷ್ಯ' —ಸಂ)

ವೆಂಕಟಸ್ವಾಮಿ ಆಯೋಗದ ವರದಿಗೆ ವಿದ್ಯಾರ್ಥಿಗಳ ಪ್ರತಿಭಟನೆ : ಸೆ. 18 ಹರಿಹರಪುರ ಬಂದ್

ಹರಿಹರಪುರ : ಇಲ್ಲಿನ ಜೂನಿಯರ್ ಕಾಲೇಜಿನ ವಿದ್ಯಾರ್ಥಿಗಳು ಸೆ. 18 ರಂದು ಹರಿಹರಪುರ ಬಂದ್‌ಗೆ ಕರೆನೀಡಿ ಅಂದಿನ ತರಗತಿಗಳನ್ನು ಬಹಿಷ್ಕರಿಸಿ ವೆಂಕಟಸ್ವಾಮಿ ಆಯೋಗದ ವರದಿಯಿಂದ ಆದ ಅನ್ಯಾಯದ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಸಿದರು. ಇದರಲ್ಲಿ ಸಾರ್ವಜನಿಕರೂ ಕೂಡ ಪಾಲ್ಗೊಂಡಿದ್ದರು. ನಂತರ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಸೇರಿದ್ದ ಸಭೆಯನ್ನು ಉದ್ದೇಶಿಸಿ ವೆಂಕಟಸ್ವಾಮಿ ಆಯೋಗದ ವರದಿಯಿಂದ ಆದ 'ಅನ್ಯಾಯದ ಬಗ್ಗೆ ಬಿ. ಜಿ. ಚಂದ್ರಶೇಖರ್ ಹಾಗೂ ಕಾಲೇಜು ವಿದ್ಯಾರ್ಥಿಗಳಾದ ಪ್ರಖ್ಯಾತ್ ಮತ್ತು ಸುಧೀರ್ ಮಾತನಾಡಿದರು. ವರದಿ ರದ್ದು ಪಡಿಸಬೇಕೆಂದು ಒತ್ತಾಯಿಸುವ ಮನವಿಯನ್ನು ಪೋಲೀಸ್ ಅಧಿಕಾರಿಗಳಿಗೆ ಸಲ್ಲಿಸಲಾಯಿತು. (ವರದಿ: ಪ್ರಖ್ಯಾತ್)

ಕಾಫಿ ಮಂಡಳಿ ವಿಸ್ತರಣಾ ಉಪ ನಿರ್ದೇಶಕರ ಕಛೇರಿ ಸ್ಥಳಾಂತರ

ಚಿಕ್ಕಮಗಳೂರಿನ ರತ್ನಗಿರಿ ರಸ್ತೆಯಲ್ಲಿದ್ದ ಕಾಫಿ ಮಂಡಳಿಯ ವಿಸ್ತರಣಾ ಉಪ ನಿರ್ದೇಶಕರ ಕಛೇರಿಯನ್ನು ಪ್ರಭು ರಸ್ತೆಯಲ್ಲಿ ಚರ್ಚ್ ಎದುರಿನ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ ಎಂದು ಕಾಫಿ ಮಂಡಳಿಯ ಪ್ರಕಟಣೆ ತಿಳಿಸಿದೆ.

ನ.ರಾ.ಪುರ ತಾ||ಪ್ರೌಢಶಾಲಾಕ್ರೀಡಾಕೂಟ

ನರಸಿಂಹರಾಜಪುರ : ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ನ. ರಾ. ಪುರ ಜೇಸೀಸ್ ಇವರ ಸಂಯುಕ್ತ ಆಶ್ರಯದಲ್ಲಿ ಪ್ರೌಢಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ತಾಲ್ಲೂಕ್ ಮಟ್ಟದ ಕ್ರೀಡಾಕೂಟ ಸೆ. 19 ಮತ್ತು 20ರಂದು ಕಿರಿಯ ಕಾಲೇಜಿನ ಕ್ರೀಡಾಂಗಣದಲ್ಲಿ ನಡೆಯಿತು.

19ರಂದು ಬೆಳಿಗ್ಗೆ ನಡೆದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ಡಿ.ಸಿ. ದಿವಾಕರ್ ವಹಿಸಿದ್ದರು. ಚಿಕ್ಕ ಅಗ್ರಹಾರ ವಲಯ ಅರಣ್ಯಾಧಿಕಾರಿ ಕೆ. ಎನ್. ಲಕ್ಷ್ಮೀನಾರಾಯಣ್ ಕ್ರೀಡಾಕೂಟವನ್ನು ಉದ್ಘಾಟಿಸಿದರು.

ಎರಡು ದಿನದ ಈ ಕ್ರೀಡಾಕೂಟದಲ್ಲಿ ತಾಲ್ಲೂಕಿನ ಐದು ಪ್ರೌಢಶಾಲೆಗಳು ಭಾಗವಹಿಸಿದ್ದು, ಬಾಲಕರ ವಿಭಾಗದ ತಂಡ ಪ್ರಶಸ್ತಿಯನ್ನು ಬಾಳೆಹೊನ್ನೂರಿನ ರೇಣುಕಾಚಾರ್ಯ ಕಿರಿಯ ಕಾಲೇಜು ತಂಡವೂ, ಬಾಲಕಿಯರ ವಿಭಾಗದ ತಂಡ ಪ್ರಶಸ್ತಿಯನ್ನು ಇಲ್ಲಿನ ದೀಪ್ತಿ ಪ್ರೌಢಶಾಲೆಯೂ ಪಡೆದುಕೊಂಡವು.

ದಿನಾಂಕ 20ರಂದು ನಡೆದ ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಪುರಸಭಾಧ್ಯಕ್ಷ ಮಾಗ ಚಂದ್ರಶೇಖರ್ ವಹಿಸಿದ್ದರು. ವೈದ್ಯಾಧಿಕಾರಿ ಡಾ|| ಟಿ. ಎಂ. ಮಹದೇವಪ್ಪ ಬಹುಮಾನ ವಿತರಣೆ ಮಾಡಿದರು. (ವರದಿ: ನವಿಲೂರು ಪ್ರಕಾಶ್.)

ಗಾಂಧೀ ಜಯಂತಿಯಂದು ಬಸರಿಕಟ್ಟೆ ರಸ್ತೆಯಲ್ಲಿ ವಿದ್ಯಾರ್ಥಿಗಳ ಶ್ರಮದಾನ

ಬಸರಿಕಟ್ಟೆ: ಜಯಪುರದಿಂದ ಬಸರೀಕಟ್ಟೆಗೆ ಬರುವ ಲೋಕೋಪಯೋಗಿ ಇಲಾಖೆಯ ರಸ್ತೆಯಲ್ಲಿ ಬಸರಿಕಟ್ಟೆಯ ಸಮೀಪ ಒಂದೂವರೆ ಕಿಲೋಮೀಟರಿನಷ್ಟು ದೂರ ಟಾರು ಹಾಕಿಲ್ಲ. ರಸ್ತೆಯಲ್ಲಿ ಜಲ್ಲಿ ಚೆಲ್ಲಾಪಿಲ್ಲಿಯಾಗಿ ಎದ್ದು ಪಾದಚಾರಿಗಳೂ ಕಾಲಿಡಲು ಸ್ಥಳವಿಲ್ಲದಂತೆ ತುಂಬಿಕೊಂಡಿದೆ. ದ್ವಿಚಕ್ರ ವಾಹನಗಳಂತೂ ಈ ದೂರವನ್ನು ಕ್ರಮಿಸಿಬಿಟ್ಟರೆ ಅದರ ಸವಾರರು ಜಯಿಸಿಬಿಟ್ಟೆವೆಂದು ಹೆಮ್ಮೆ ಪಡುತ್ತಿದ್ದಾರೆ. ಈ ಬಗ್ಗೆ ಊರವರ ಕೂಗು ಸರ್ಕಾರದ ಕಿವಿಗೆ ಮುಟ್ಟಿದಂತಿಲ್ಲ. ಇದನ್ನು ಮನಗಂಡು ಬಸರಿ ಕಟ್ಟೆಯ ಸಿಂಡಿಕೇಟ್ ಬ್ಯಾಂಕಿನಿಂದ ಪೋಷಿತವಾದ ಶ್ರೀ ಸದ್ಗುರು ಪ್ರೌಢಶಾಲೆಯ 'ಭಾವೀ ಕೃಷಿಕ ಸಂಘ'ದ ಸದಸ್ಯರು ಗಾಂಧೀ ಜಯಂತಿಯ ದಿನವಾದ ಅಕ್ಟೋಬರ್ 2ರಂದು ಈ ರಸ್ತೆಯಲ್ಲಿ ಶ್ರಮದಾನ ಮಾಡಿ, ಚೆಲ್ಲಾಪಿಲ್ಲಿಯಾಗಿರುವ ಜಲ್ಲಿಯನ್ನು ಹೆಕ್ಕಿ ಬದಿಯಲ್ಲಿ ರಾಶಿ ಮಾಡುವ ಕಾರ್ಯಕ್ರಮವನ್ನು ಇರಿಸಿಕೊಂಡಿದ್ದಾರೆ.

ವಿದ್ಯುಚ್ಛಕ್ತಿ ಸೇವೆ ಸುಧಾರಣೆ ಬಗ್ಗೆ ....

(3ನೇ ಪುಟದಿಂದ)
ಕ್ರಮ ಕೈಗೊಳ್ಳುವ ಭರವಸೆ ಕೊಟ್ಟರು.

ಹಾಗೆಯೇ ಸಂಜೆಯ ಹೊತ್ತು ಮೇಲಿನ ಪೇಟೆಯ ವಿದ್ಯುತ್ ಬಳಕೆದಾರರು ವಿದ್ಯುಚ್ಛಕ್ತಿಯ ತೊಂದರೆಯಿದ್ದಲ್ಲಿ 131ನೇ ನಂಬರಿಗೆ ಫೋನ್ ಮಾಡಿದರೆ ತಾವು ಅದನ್ನು ಬರೆದಿಟ್ಟುಕೊಳ್ಳುವುದಾಗಿಯೂ, ರಾತ್ರಿ ಲೈನ್ ಮನ್‌ಗಳು ಮೇಲಿನ ಪೇಟೆಗೆ ಬಂದಾಗ ಅಥವಾ ಪೇಟೆಯಿಂದ ಫೋನ್ ಮಾಡಿ ವಿಚಾರಿಸಿದಲ್ಲಿ ವಿವರಗಳನ್ನು ಅವರಿಗೆ ತಿಳಿಸುವುದಾಗಿಯೂ ಕಣ್ಣನ್ ತಿಳಿಸಿದರು. ಈ ಸಲಹೆಯನ್ನೂ ಕೇಶವ ಮೂರ್ತಿಯವರು ಸ್ವೀಕರಿಸಿ ಅದರಂತೆ ವ್ಯವಸ್ಥೆ ಮಾಡುವ ಭರವಸೆ ಕೊಟ್ಟರು.

ಇದೇ ರೀತಿ ಬಸ್ ಸ್ಟಾಂಡಿನಿಂದ ಕೆಳಗೆ ವಿದ್ಯುಚ್ಛಕ್ತಿಯ ಸರಬರಾಜು ಏರು ಪೇರಾಗುತ್ತಿರುವ ಬಗ್ಗೆಯೂ ಅಲ್ಲಿನ ನಾಗರಿಕರ ದೂರನ್ನು ಅವರ ಗಮನಕ್ಕೆ ತಂದಾಗ, ಅಲ್ಲಿನ ಟ್ರಾನ್ಸ್‌ಫಾರ್ಮರ್ ಮೇಲೆ ಹೆಚ್ಚಿನ 'ಲೋಡ್' ಅಕ್ಕಿ ಗಿರಣಿ ಮತ್ತು ಬೇಕರಿಗಳಿಂದ ಇರುವುದಾಗಿದ್ದು, ಅವೆರಡೂ ರಾತ್ರಿಯಲ್ಲಿ ಅಷ್ಟೇನೂ ವಿದ್ಯುತ್ ಬಳಸುವುದಿಲ್ಲವಾಗಿ ಅಲ್ಲಿ ಏರುಪೇರಾಗುವುದಕ್ಕೆ ಹೆಚ್ಚಿನ ಕಾರಣವೇನೂ ಇಲ್ಲ. ಆದರೂ, ತೊಂದರೆಯಾಗಿರುವವರು ನಿರ್ದಿಷ್ಟವಾಗಿ ದೂರು ಕೊಟ್ಟಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಇನ್ನು, ಅಲ್ಲಿ ಯಾರೋ ಕಿಡಿಗೇಡಿಗಳು ಬೇಕರಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಒಮ್ಮೊಮ್ಮೆ ಬೆಳಗಿನ ಜಾವ ಲೈನನ್ನು ಕತ್ತರಿಸುತ್ತಿದ್ದಾರೆಂದು ತಿಳಿದು ಬಂದಿದ್ದು, ಈ ಬಗ್ಗೆ ಪೋಲೀಸರಿಗೆ ದೂರು ನೀಡಲು ಕ್ರಮ ತೆಗೆದುಕೊಂಡಿದ್ದೇವೆ ಎಂದು ಕೇಶವ ಮೂರ್ತಿ ಹೇಳಿದರು.

ಅಂತೆಯೇ, ಮೇಲಿನ ಪೇಟೆ ಟ್ರಾನ್ಸ್‌ಫಾರ್ಮರ್‌ನಲ್ಲಿ ಕಂಡ ಕಂಡ ಸಾರ್ವಜನಿಕರೆಲ್ಲ ಸ್ವಿಚ್ಚನ್ನು 'ದುರಸ್ತಿ' ಮಾಡಹೋಗಿ ಹಾಳುಗೆಡವುತ್ತಿದ್ದು ಇದರಿಂದಲೂ ಮೇಲಿನ ಪೇಟೆ ವಿದ್ಯುತ್ ಸರಬರಾಜಿಗೆ ಒಮ್ಮೊಮ್ಮೆ ಧಕ್ಕೆಯಾಗುತ್ತಿದೆ. ಸಾರ್ವಜನಿಕರು ಹೀಗೆ ಮಾಡದೆ ಇಲಾಖೆಯೊಂದಿಗೆ ಸಹಕರಿಸಬೇಕು ಎಂದೂ ಅವರು ಮನವಿ ಮಾಡಿದರು.

ಈಗ ಪ್ರತಿ ರಾತ್ರಿ 8 ಗಂಟೆಯ ಹೊತ್ತಿಗೆ ಲೈನ್‌ಮನ್‌ಗಳು ತಮ್ಮಲ್ಲಿಗೆ ಬಂದು ಅಥವಾ ಫೋನ್ ಮಾಡಿ ಯಾವುದಾದರೂ ದೂರುಗಳಿವೆಯೆ ಎಂದು ವಿಚಾರಿಸುತ್ತಿದ್ದು, ಅಗತ್ಯವಿರುವ ಸಾರ್ವಜನಿಕರು ತಮ್ಮ ಈ ಕೊಡುಗೆಯ ಪ್ರಯೋಜನ ಪಡೆದುಕೊಳ್ಳಬಹುದೆಂದು ತಿಳಿಸಿರುವ ಕಣ್ಣನ್ ಅವರು, ಸಾರ್ವಜನಿಕರ ಮನವಿಗೆ ಸೂಕ್ತ ರೀತಿಯಲ್ಲಿ ಗಮನ ಕೊಟ್ಟು ಸಾಧ್ಯವಿರುವಷ್ಟು ಕ್ರಮ ತೆಗೆದುಕೊಂಡಿರುವ ಬಗ್ಗೆ ಕೇಶವ ಮೂರ್ತಿ ಮತ್ತು ಅವರ ಸಿಬ್ಬಂದಿಗಳಿಗೆ ನಾಗರಿಕರ ಪರವಾಗಿ ಕೃತಜ್ಞತೆ ಸಲ್ಲಿಸಿದ್ದಾರೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ